ಮೈಸೂರು ನಂದಿನಿ
ಫ್ಯಾಮಿಲಿ ರೆಸ್ಟೋರೆಂಟ್
mysore nandhini
Family Restaurant Veg & Non Veg
Andhra Style Irwin Road, Near KSRTC Bus Stand Mysuru-01
Tandoori Chinese Sea Food
Ph: 0821 - 4191009, 2430241
90082 85555
Parking Available
FREE HOME DELIVERY

ಆಂದೋಲನ

ದಿನಪತ್ರಿಕೆ

ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

ಎಸ್.ಡಿ.ಜಿ. ಗೋಲ್ಡ್ ಕರಪನ
ಒಳ್ಳೆಯ ಮನಸ್ಸು
8549957578

ನಮ್ಮದು ಮನುಷ್ಯತ್ವದ ಹಿಂದುತ್ವ. ರಾಕ್ಷಸಿ ಪ್ರವೃತ್ತಿ ಹಿಂದುತ್ವ ಅಲ್ಲ. ಹಿಂದುತ್ವ ಬಿಜೆಪಿಗೆ ಗುತ್ತಿಗೆಯಲ್ಲ ಎಂದು ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ ಅವರ ಹೇಳಿಕೆಗೆ ಸಿಎಂ ಸಿದ್ದರಾಮಯ್ಯ ಉಡುಪಿಯಲ್ಲಿ ಸೋಮವಾರ ತಿರುಗೇಟು ನೀಡಿದರು.

ಯೋಗಿಗೆ ಸಿದ್ದರಾಮಯ್ಯ ಹಿಂದುತ್ವದ ತಿರುಗೇಟು

ಜಾ.ದಳ ಉಳಿವು ನಿಮ್ಮ ಹೊಣೆ

ಗರಿಷ್ಠ: ೨೯° । ಕನಿಷ್ಠ: ೧೭° ಚಿಪ್ಪಿಲು ತಾಪ ಏರಿಕೆ, ಮಳೆ ಮೋಡಗಳು ದೂರ

ಪಕ್ಷ ಉಳಿಸಿ ಬೆಳೆಸುವುದು ಮುಖ್ಯ. ನನ್ನ ನಂತರವೂ ಜಾ.ದಳ ಪಕ್ಷವನ್ನು ಉಳಿಸಿಕೊಳ್ಳಿ ಎಂದು ಹಾವನಗದಲ್ಲಿ ಪಕ್ಷದ ಸಭೆಯಲ್ಲಿ ಎಚ್.ಡಿ.ದೇವೇಗೌಡರು ಕಾರ್ಯಕರ್ತರಿಗೆ ಹೇಳಿದರು.

ಸಂಪುಟ: ೪೭, ಸಂಚಿಕೆ: ೯, ರಾಷ್ಟ್ರೀಯ ಶಕ ೧೯೩೯ ಶಿಶಿರ: ಶುಕ್ಲ–ಮಾಘ ೧೯, ●ಅಷ್ಟಮಿ – ಚಿತ್ತಾ, ಮಂಗಳವಾರ, ಜ.೯, ೨೦೧೮, ದೂರವಾಣಿ: ೨೪೪೯೫೫೦, ೨೪೪೯೫೫೦೪, ೨೪೪೯೫೫೦೫, ಫ್ಯಾಕ್ಸ್: ೨೪೪೯೫೫೦೩, ಪುಟ : ೧೨, ರೂ. ೩

ಪರಿಚಿತರ ಮನೆಯನ್ನೇ ದೋಚಿದ ಅಪ್ಪ–ಮಗ

- ಸಿಸಿಬಿ ಪೊಲೀಸರಿಂದ ಆರೋಪಿಗಳ ಬಂಧನ
- ೨೯ ಲಕ್ಷ ರೂ. ನಗ, ನಗದು, ಗೂಡ್ಸ್ ಆಟೋ ವಶ

ಮೈಸೂರು,ಜ.೮– ವ್ಯಾಪಾರದ ಕಾರಣವಾಗಿ ಪರಿಚಯವಾಗಿದ್ದ ಸ್ನೇಹಿತನ ಮನೆಗೇ ನುಗ್ಗಿ ೨೯ ಲಕ್ಷ ರೂ.ಗಳಷ್ಟು ನಗ, ನಗದು ಕಳವು ಮಾಡಿದ್ದ ಇಬ್ಬರು ಖದೀಮರನ್ನು ನಗರ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಬಂಧಿತರಾದ ಅಪ್ಪ–ಮಗನಿಂದ ೨೩ ಲಕ್ಷ ರೂ. ನಗದು ಹಾಗೂ ೬ ಲಕ್ಷ ರೂ. ಬೆಲೆ ಬಾಳುವ ೨೦೮ ಗ್ರಾಂ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ ಗೂಡ್ಸ್ ಆಟೋವನ್ನು ವಶಪಡಿಸಿಕೊಳ್ಳಲಾಗಿದೆ.

ನಗರದ ಮಂಡಿಮೊಹಲ್ಲಾ ನಿವಾಸಿಗಳಾದ ಇಸ್ಮಾಯಿಲ್ ಷರೀಫ್ ಅವರ ಮಗ ರಿಯಾಜ್ ಷರೀಫ್(೪೨) ಹಾಗೂ ಆತನ ಮಗ ಫಯಾಜ್ ಷರೀಫ್(೨೨) ಎಂಬವರೇ ಬಂಧಿತರು.

ನಗರದ ಮಂಡಿ ಮೊಹಲ್ಲಾದ ಪಟ್ಟೇಗಾರ ಸ್ಟ್ರೀಟ್ ನಿವಾಸಿ ಕ್ಯಾಸ್ಟಲಿರಿಯ ಸುನಿಲ್ ಎಂಬವರ ಕುಟುಂಬ ಸಮೇತ ಪ್ರವಾಸಕ್ಕೆ ತೆರಳಿರುವ ವಿಷಯ ತಿಳಿದಿದ್ದ ಖದೀಮ ಅಪ್ಪ–ಮಗ, ಬೀಗದ ಕೀ ಬಳಸಿಯೇ ಮನೆಯೊಳಕ್ಕೆ ಪ್ರವೇಶಿಸಿ ನಗದು, ಚಿನ್ನಾಭರಣ ದೋಚಿದ್ದರು. ಬಳಿಕ ಸಿಸಿಬಿ ಪೊಲೀಸರಿಗೆ ಸೆರೆ ಸಿಕ್ಕಿರು ಎಂದು ನಗರ ಪೊಲೀಸ್ ಆಯುಕ್ತ ಡಾ.ಎ.ಸುಬ್ರಹ್ಮಣ್ಯೇಶ್ವರರಾವ್ ಅವರು ತಮ್ಮ ಕಚೇರಿಯಲ್ಲಿ ಸೋಮವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ತಾಮ್ರದ ಪಾತ್ರೆ ವ್ಯಾಪಾರಿಯಾಗಿದ್ದ ಸುನಿಲ್ ಅವರು ಡಿ.೩೧ರಂದು ಕುಟುಂಬದವರೊಂದಿಗೆ ಮೇಲುಕೋಟೆ ದೇವಸ್ಥಾನಕ್ಕೆ ತೆರಳಿದ್ದರು. ಅದೇ ದಿನ ಮನೆಯಲ್ಲಿ ಕಳವು ನಡೆದಿತ್ತು. ಪ್ರವಾಸದಿಂದ ವಾಪಸಾದ ಸುನಿಲ್ ಅವರಿಗೆ ಮನೆಯಲ್ಲಿ ಕಳವು ನಡೆದಿರುವುದು ತಿಳಿಯಿತು. ಬಳಿಕ ಅವರು ಮಂಡಿ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದರು.

ಮೈಸೂರಿನ ಮಂಡಿಮೊಹಲ್ಲಾದಲ್ಲಿ ಸ್ನೇಹಿತನ ಮನೆಯನ್ನೇ ದೋಚಿದ್ದ ಖದೀಮ ಅಪ್ಪ-ಮಗನ ಬಂಧನ ಸುದ್ದಿಯನ್ನು ನಗರ ಪೋಲೀಸ್ ಆಯುಕ್ತ ಡಾ.ಎ.ಸುಬ್ರಹ್ಮಣ್ಯೇಶ್ವರರಾವ್ ಅವರು ತಮ್ಮ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಡಿಸಿಪಿಗಳಾದ ವಿಷ್ಣುವರ್ಧನ್ ಮತ್ತು ಡಾ.ವಿಕ್ರಂ ವಿ.ಅಮಟೆ ಚಿತ್ರದಲ್ಲಿದ್ದಾರೆ.

ಆಯುಕ್ತರ ಕಿವಿಮಾತು

- ಮನೆ ಬೀಗದ ಕೀ ಇತರರಿಗೆ ಸುಲಭಕ್ಕೆ ಸಿಗುವಂತೆ ಇಡಬಾರದು.
- ಚಿನ್ನಾಭರಣಗಳನ್ನು ಬ್ಯಾಂಕಿನ ಲಾಕರ್‌ನಲ್ಲಿಡುವುದು ಸುರಕ್ಷಿತ.
- ಹಣಕಾಸು ವಿಚಾರ ಹೊರಗಿನವರೊಂದಿಗೆ ಹಂಚಿಕೊಳ್ಳಬಾರದು
- ಬೇರೆ ಊರಿಗೆ ತೆರಳಿದಾಗ ಮನೆ ಹೊಣೆ ನಂಬಿಕಸ್ತರಿಗೆ ಮಷಿನ ಇಲ್ಲದೇ ಪಕ್ಕದ ಮನೆಗೆ, ಸಮೀಪದ ಹೊಲೀಸ್ ಠಾಣೆಗೆ ಮಾಹಿತಿ ನೀಡಿ.
- ಮನೆಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವುದು ಉತ್ತಮ.
- ಮುಖ್ಯ ಬಾಗಿಲಿಗೆ, ಗೇಟ್‌ಗೆ ಹ್ಯಾಂಗಿಂಗ್ ಲಾಕ್ ಹಾಕಬಾರದು.

ಸುನಿಲ್ ಅವರ ಮನೆ ಬಳಿಯ ಸಿಸಿಟಿವಿ ದೃಶ್ಯಾವಳಿ ಆಧರಿಸಿ ಪೊಲೀಸರು ಪ್ರಮುಖ ಆರೋಪಿ ರಿಯಾಜ್ ಷರೀಫ್‌ನನ್ನು ಭಾನುವಾರ ಬಂಧಿಸಿದರು.

ಪುಟ ೧೦

ನಾನೇ ಹುಲಿರಾಯ, ಲೆಕ್ಕ ಬರೆದುಕೊಳ್ಳಿ...

ಪದದ ಪುಟ: ೪೫

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಸೋಮವಾರ ಹುಲಿ ಗಣತಿ ವೇಳೆ ಹೊದೆ ಹಿಂದೆ ಬಿರಮಿಸಿದ್ದ ಹುಲಿರಾಯ ಗಣತಿ ತಂಡದವರಿಗೆ ಕಾಣಿಸಿಕೊಂಡಿದ್ದು ಹೀಗೆ. ಜತೆಗೆ ಜಂಕೆ, ನವಿಲುಗಳೂ ಗೋಚರಿಸಿ ಗಣತಿದಾರರಲ್ಲಿ ಹರ್ಷ ಮೂಡಿಸಿವೆ.

೨೪ಕ್ಕೆ ಮೇಯರ್ ಚುನಾವಣೆ

- ಪ್ರಥಮ ಪ್ರಜೆ ಸ್ಥಾನ ಕಾಂಗ್ರೆಸ್‌ಗೆ ಖಚಿತ
- ಉಪ ಮಹಾಪೌರ ಸ್ಥಾನ ಜಾ.ದಳಕ್ಕೆ ಮೀಸಲು

ಮೈಸೂರು,ಜ.೮– ಮೈಸೂರು ಮಹಾನಗರ ಪಾಲಿಕೆಯ ಪ್ರಸಕ್ತ ಅವಧಿಯ ಕೊನೇ ವರ್ಷದ ಮಹಾಪೌರ, ಉಪ ಮಹಾಪೌರ ಸ್ಥಾನಗಳಿಗೆ ಜ.೨೪ರಂದು ಚುನಾವಣೆ ನಡೆಯಲಿದೆ.

ಮಹಾಪೌರ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಹಾಗೂ ಉಪ ಮಹಾಪೌರ ಸ್ಥಾನ ಪರಿಶಿಷ್ಟ ಪಂಗಡ ಮಹಿಳೆಗೆ ನಿಗದಿಯಾಗಿದ್ದು, ಜ.೨ರಂದೇ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಬಳಿಕ ಚುನಾವಣೆಗೆ ದಿನಾಂಕ ನಿಗದಿಪಡಿಸುವಂತೆ ಪಾಲಿಕೆ ಆಯುಕ್ತರು ಚುನಾವಣಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತರಿಗೆ ಜ.೪ರಂದು ಪತ್ರ ಬರೆದಿದ್ದರು.

ಪಾಲಿಕೆಯ ಪ್ರಸಕ್ತ ಆಡಳಿತ ಅವಧಿಯ ಕೊನೆ ವರ್ಷದ ಮಹಾಪೌರ ಸ್ಥಾನ ಅನಾಯಾಸವಾಗಿ ಕಾಂಗ್ರೆಸ್ ಮಡಿಲಿಗೆ ಬಿದ್ದಿದ್ದು, ಇತ್ತೀಚಿನ ವರ್ಷದಲ್ಲಿ ಮೊದಲ ಬಾರಿಗೆ ಮಹಾಪೌರ ಮತ್ತು ಉಪ ಮಹಾಪೌರರ ಅವಿರೋಧ ಆಯ್ಕೆಗೆ ವೇದಿಕೆ ಸಜ್ಜಾಗಿದೆ.

ಳಿ ವರ್ಷಗಳಿಂದ ಮೈತ್ರಿ ಆಡಳಿತ ನಡೆಸಿದ ಜಾ.ದಳ ಮತ್ತು ಬಿಜೆಪಿಯಲ್ಲಿ ಪರಿಶಿಷ್ಟ ಜಾತಿ ಮಹಿಳೆ ಮೀಸಲು ಕ್ಷೇತ್ರದಿಂದ ಆಯ್ಕೆಯಾದ ಯಾವುದೇ ಸದಸ್ಯೆ ಇಲ್ಲದ ಪಿನ್ಸೆಲೆಯಲ್ಲಿ ಕಾಂಗ್ರೆಸ್‌ಗೆ ಸುಲಭದಲ್ಲಿ ಅಧಿಕಾರ ದಕ್ಕಲಿದೆ. ಅದೇ ರೀತಿ ಉಪ ಮಹಾಪೌರರ ಸ್ಥಾನ ಜಾ.ದಳಕ್ಕೆ ಲಭ್ಯವಾಗಲಿದೆ.

ಕಾಂಗ್ರೆಸ್ ಸದಸ್ಯರಾದ ಕಮಲಾ ಉದಯ್ (ವಾರ್ಡ್ ನಂ ೫೧), ಇಬ್ಬರೇ ಭಾಗ್ಯವತಿ (ವಾರ್ಡ್ ನಂ.೨೩) ಇಬ್ಬರಲ್ಲಿ ಒಬ್ಬರು ಮಹಾಪೌರರಾಗುವುದು ಬಹುತೇಕ ಖಚಿತವಾಗಿದೆ.

ಉಪ ಮಹಾಪೌರರ ಸ್ಥಾನ ಪರಿಶಿಷ್ಟ ಪಂಗಡ ಮಹಿಳೆಗೆ ಮೀಸಲಾಗಿದ್ದು, ಈ ವರ್ಗದಿಂದ ಆಯ್ಕೆಯಾಗಿರುವ ಏಕೈಕ ಮಹಿಳೆ ಜಾ.ದಳದ ಇಂದಿರಾ ಮಹೇಶ್ (ವಾರ್ಡ್ ನಂ.೬೧) ಅವರು ಉಪ ಮಹಾಪೌರರಾಗಲಿದ್ದಾರೆ.

ದೇವನೂರ ಮಹಾದೇವರಿಗೆ ಶಿವರಾಮ ಕಾರಂತ ಪ್ರಶಸ್ತಿ

ಬೆಂಗಳೂರು,ಜ.೮– ಹಿರಿಯ ಸಾಹಿತಿ, ಚಿಂತಕ ದೇವನೂರ ಮಹಾದೇವ ಅವರಿಗೆ ಮೂಡಬಿದಿರೆಯ ಶಿವರಾಮ ಕಾರಂತ ಪ್ರತಿಷ್ಠಾನ ಕೊಡಮಾಡುವ 'ಶಿವರಾಮ ಕಾರಂತ ಪ್ರಶಸ್ತಿ' ಸಂದಿದೆ.

ಸೂಕ್ಷ್ಮ ಮನಸ್ಸಿನ ಬರಹಗಾರ, ರಾಜಿಯಾಗದೇ ಮೌಲ್ಯಗಳಿಗಾಗಿ ನಿರಂತರ ಹೋರಾಡುತ್ತಾ ಬರುತ್ತಿರುವ ಅವರ ಸಾಧನೆ ಪರಿಗಣಿಸಿ ಈ ಮಹತ್ವದ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ೧೫ ಸಾವಿರ ರೂ. ನಗದು ಮತ್ತು ಫಲಕ ಒಳಗೊಂಡಿದೆ. ೨೬ಫೆ ದಲ್ಲೇ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಕೆಅಮರನಾಥ ಶೆಟ್ಟಿ ಮತ್ತು ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಡಾ.ಜಯಪ್ರಕಾಶ ಮಾವಿನ ಕುಳಿ ಸೋಮವಾರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದೀಪಕ್ ರಾವ್ ಕೊಲೆ ಪ್ರಕರಣ

ಬಿಜೆಪಿ ಆರೋಪಿ: ಎಚ್‌ಡಿಕೆ ಯು ಟರ್ನ್

ಮೈಸೂರು,ಜ.೮– ಮಂಗಳೂರಿನ ಯುವಕ ದೀಪಕ್ ರಾವ್ ಕೊಲೆಗೆ ಬಿಜೆಪಿ ಕಾರ್ಯಕರ್ತರೇ ಕಾರಣ. ಈ ಹತ್ಯೆಯಲ್ಲಿ ಬಿಜೆಪಿ ಕಾರ್ಪೋರೇಟರ್ ಪಾತ್ರವಿದೆ ಎಂದು ಸೋಮವಾರ ಬೆಳಿಗ್ಗೆ ನೇರ ಆರೋಪ ಹೊರಿಸಿದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು, ಕೆಲ ಸಮಯದ ಬಳಿಕ ನನಗಿರುವ ಮಾಹಿತಿ ಸುಳ್ಳೂ ಇರಬಹುದು ಎಂದು ಸ್ಪಷ್ಟನೆ ನೀಡಿದ್ದಾರೆ.

ನಗರದ ಕಲಾಮಂದಿರದಲ್ಲಿ ಸೋಮವಾರ ಆಯೋಜಿಸಿದ್ದ 'ಬಲ್ಲವರೊಂದಿಗೆ ಬೌದ್ಧಿಕ ಚಿಂತನೆ' ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ದೀಪಕ್ ರಾವ್ ಹತ್ಯೆಗೆ ಸುಪಾರಿ ಕೊಟ್ಟವರನ್ನು ಸರ್ಕಾರ ಏಕೆ ಪತ್ತೆ ಹಚ್ಚಿಲ್ಲ ಎಂದು ಪ್ರಶ್ನಿಸಿದರು.

ಆರೋಪಿಗಳು ಸತ್ಯ ಹೇಳದೂರು ಸರ್ಕಾರ ಮೌನ ವಹಿಸಿರುವುದೇಕೆ? ನಾನು ಮಾಹಿತಿ ಪಡೆದೇ ಮಾತನಾಡುತ್ತಿದ್ದೇನೆ. ಪ್ರಕರಣದಲ್ಲಿ ಕಾಂಗ್ರೆಸ್–ಬಿಜೆಪಿ ಎರಡೂ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳಂತೆ ವರ್ತಿಸುತ್ತಿವೆ. ಬಿಜೆಪಿ–ಕಾಂಗ್ರೆಸ್ ಹೊಂದಾಣಿಕೆ ಮಾಡಿಕೊಂಡಿರದೇಕೆ ಎಂದರು.

ರಾಜ್ಯದಲ್ಲಿ ಶಾಂತಿ ನೆಲೆಸಲು ಅಗತ್ಯ ಮಾರ್ಗ ಸೂಚಿಗಳನ್ನು ಪಕ್ಷ ಆಸುಸರಿಸ ಲಿದೆ. ನಾಳೆ ಶಾಂತಿ ಸಭೆ, ಸೌಹಾರ್ದಯಾತ್ರೆಗೆ ನಿರ್ಧರಿಸಲಾಗಿತ್ತು ಆದರೆ ಎರಡೂ ರಾಷ್ಟ್ರೀಯ ಪಕ್ಷಗಳ ಇತ್ತೀಚಿನ ನಡೆಗಳಿಂದ ಸೌಹಾರ್ದ ಯಾತ್ರೆ ಸಾಧ್ಯವಾಗಲಿಲ್ಲ ಎಂದರು.

ಪುಟ ೧೦

ಐಎಸ್‌ಐ ಹೆಲ್ಮೆಟ್ ಕಡ್ಡಾಯ: ೩೧ರವರೆಗೆ ಗಡುವು ವಿಸ್ತರಣೆ

ಮೈಸೂರು,ಜ.೮– ಐಎಸ್‌ಐ ಗುರುತಿನ ಹೆಲ್ಮೆಟ್‌ಗಳು ಸದ್ಯ ನಗರದಲ್ಲಿ ಹೆಚ್ಚು ಲಭ್ಯವಿಲ್ಲದ ಕಾರಣ, ಹೆಲ್ಮೆಟ್ ಖರೀದಿಗೆ ಇನ್ನೂ ಹೆಚ್ಚಿನ ಕಾಲಾವಕಾಶ ನೀಡಿರುವ ನಗರ ಪೊಲೀಸ್ ಆಯುಕ್ತರು, ಜ.೩೧ರವರೆಗೂ ಗಡುವು ವಿಸ್ತರಿಸಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪೊಲೀಸ್ ಆಯುಕ್ತ ಡಾ.ಎ.ಸುಬ್ರಹ್ಮಣ್ಯೇಶ್ವರ ರಾವ್ ಅವರು, ದ್ವಿಚಕ್ರ ವಾಹನ ಸವಾರರಿಗೆ ಐಎಸ್‌ಐ ಗುರುತು ಇರುವ, ಗುಣಮಟ್ಟದ ಹೆಲ್ಮೆಟ್ ಖರೀದಿಗೆ ಜ.೩೧ರವರೆಗೆ ಕಾಲಾವಕಾಶ ನೀಡಲಾಗಿದೆ. ಆಷ್ಟರಲ್ಲಿ ಹೆಲ್ಮೆಟ್ ಖರೀದಿಸಿ ಧರಿಸಬೇಕು ಎಂದು ಹೇಳಿದರು.

೨೦೧೨ರಲ್ಲಿ ದ್ವಿಚಕ್ರವಾಹನಗಳ ೧೩೪ ಅಪಘಾತಗಳು ನಡೆದಿವೆ. ಹೆಲ್ಮೆಟ್ ಧರಿಸದೇ ಇದ್ದುದರಿಂದಾಗಿ ಳಿಗ ಮಂದಿ ಯುವಕರು ಪ್ರಾಣ ಕಳೆದುಕೊಂಡಿದ್ದಾರೆ.

ಪುಟ ೧೦

ಹೃದಯಾಘಾತ: ಸೇನಾಧಿಕಾರಿ ಸಾವು

ಭಾರತೀಯ ಸೇನೆಯ ಬಾಂಬ್ ಪತ್ತೆ ದಳದ ಜೂ.ಕಮಾಂಡೆಂಟ್ ಸಾಯಿಕುಮಾರ್ ನಿಧನ

- ಸಾಯಿಕುಮಾರ್ ಎರಡು ದಿನಗಳ ರಜೆ ಮೇಲೆ ಬಂದಿದ್ದರು
- ಪತ್ನಿ, ಪುತ್ರನೊಬ್ಬಿಗೆ ಭಾನುವಾರ ಖುಷಿಯಾಗಿ ಕಾಲ ಕಳೆದಿದ್ದರು
- ಇನ್ನೊಂದು ದಿನದಲ್ಲಿ ವಾಪಾ ಗಡಿಗೆ ಕರ್ತವ್ಯಕ್ಕೆ ತೆರಳಬೇಕಿತ್ತು

ಮೈಸೂರು,ಜ.೮– ರಜೆ ಮೇಲೆ ಊರಿಗೆ ಬಂದಿದ್ದ, ಇನ್ನೊಂದು ದಿನದಲ್ಲಿ ಕರ್ತವ್ಯಕ್ಕೆ ಮರಳಬೇಕಿದ್ದ ಸೇನಾಧಿಕಾರಿಯೊಬ್ಬರು ತೀವ್ರ ಹೃದಯಾಘಾತದಿಂದ ಮೃತಪಟ್ಟ ಘಟನೆ ನಗರದಲ್ಲಿ ನಡೆದಿದೆ.

ನಗರದ ಬಂಬೂ ಬಜಾರ್‌ನ ಮೇದರ್ ಬ್ಲಾಕ್ ನಿವಾಸಿ ವಿ.ಕೆ.ವಿ.ಕೃಷ್ಣಮೂರ್ತಿ ಅವರ ಮಗ ವಿ.ಕೆ.ಸಾಯಿಕುಮಾರ್(೪೬) ಸೋಮವಾರ ಬೆಳಿಗ್ಗೆ ಹೃದಯಾಘಾತದಿಂದ ಕೊನೆಯುಸಿರೆಳೆದರು.

ಪುಣೆಯಲ್ಲಿ ಭಾರತೀಯ ಸೇನೆಯ ಬಾಂಬ್ ಡಿಟೆಕ್ಷನ್ ಸ್ಕ್ವಾಡ್‌ನಲ್ಲಿ (ಸ್ನೋಟಕಗಳ ಪತ್ತೆ ದಳ) ಜೂನಿಯರ್ ಕಮಾಂಡೆಂಟ್ ಆಗಿದ್ದ ವಿ.ಕೆ.ಸಾಯಿಕುಮಾರ್ ಅವರನ್ನು ಕೆಲ ದಿನಗಳ ಹಿಂದಷ್ಟೆ ಪಂಜಾಬ್‌ನ ವಾಘಾ ಗಡಿಗೆ ವರ್ಗಾವಣೆ ಮಾಡಲಾಗಿತ್ತು. ಹೊಸ ಜಾಗದಲ್ಲಿ ಕರ್ತವ್ಯಕ್ಕೆ ಹಾಜರಾಗಲು ಎರಡು ದಿನಗಳ ಕಾಲಾವಕಾಶ ನೀಡಲಾಗಿತ್ತು.

ಪುಟ ೫೫

೩ ತಿಂಗಳಲ್ಲಿ ಬಡ್ತಿ ದೊರೆಯಲಿತ್ತು

ಸಾಯಿಕುಮಾರ್ ಸೇನೆಯಲ್ಲಿ ಉತ್ತಮ ಅಧಿಕಾರಿ ಎಂದು ಹೆಸರು ಪಡೆದಿದ್ದರು. ೩ ತಿಂಗಳಲ್ಲಿ ಕಮಾಂಡರ್ ಹುದ್ದೆಗೆ ಬಡ್ತಿ ದೊರೆಯಲಿತ್ತು. ಅವರ ಆಕಾಲಿಕ ಸಾವಿನ ಸುದ್ದಿ ಕೇಳಿ ಸೇನೆಯ ಹಿರಿಯ ಅಧಿಕಾರಿಗಳು ದಿಗ್ಭ್ರಾಂತರಾಗಿದ್ದಾರೆ. ಇಂಥ ಉತ್ತಮ ಸೇನಾಧಿಕಾರಿ ಅಪರೂಪ ಎಂಬ ಮಾತನ್ನು ಹೇಳಿದ್ದಾರೆ.

–ಎ.ಜಿ.ಪಾರ್ಥಸಾರಥಿ, ಮೃತರ ಭಾವಮೈದುನ, ಜಾ.ದಳ ಮುಖಂಡ

ವಿವಿ ಹಾಸ್ಟೆಲ್ ಆಹಾರ ಗುತ್ತಿಗೆ ರದ್ದು

ವಾರ್ಡನ್‌ಗಳಿಂದಲೇ ನಿರ್ವಹಣೆ; ವಿದ್ಯಾರ್ಥಿಗಳಲ್ಲಿ ಸಂಭ್ರಮ

ಹಾಸ್ಟೆಲ್ ಗುತ್ತಿಗೆ ಪದ್ಧತಿ ರದ್ದಾಗಿದ್ದರಿಂದ ವಿವಿ ಹಾಸ್ಟೆಲ್ ವಿದ್ಯಾರ್ಥಿಗಳು ಸೋಮವಾರ ಸಿಹಿ ಹಂಚಿ ಸಂಭ್ರಮಿಸಿದರು.

ಮೈಸೂರು,ಜ.೮– ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ನಿಲಯದ ಊಟದ ವ್ಯವಸ್ಥೆಯ ಗುತ್ತಿಗೆ ಪದ್ಧತಿಗೆ ವಿವಿ ಆಡಳಿತ ಮಂಡಳಿ ಇತಿಶ್ರೀ ಹಾಡಿದೆ. ಸೋಮವಾರದಿಂದಲೇ ಜಾರಿಗೆ ಬರುವಂತೆ ಮೈಸೂರು ವಿವಿಯೇ ಹಾಸ್ಟೆಲ್‌ಗಳ ನಿರ್ವಹಣೆ ಹೊಣೆ ಹೊತ್ತಿದೆ.

ಕಳೆದ ೨೦ ವರ್ಷಗಳಿಂದ ವಿವಿ ವಿದ್ಯಾರ್ಥಿ ನಿಲಯಗಳಲ್ಲಿ ಗುತ್ತಿಗೆ ಪದ್ಧತಿ ಜಾರಿಯಲ್ಲಿತ್ತು. ಹೊ.ಎಂ. ಮಾದಯ್ಯ ಅವರು ಕುಲಪತಿಗಳಾಗಿದ್ದ ಅವಧಿಯಲ್ಲಿ ಗುತ್ತಿಗೆ ಪದ್ಧತಿ ಜಾರಿಯಾಗಿತ್ತು. ಊಟ, ತಿಂಡಿ ಅವ್ಯವಸ್ಥೆ ವಿರುದ್ಧ ಆಗಿಂದಾಗ್ಗೆ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದರು. ಕಳಪೆ ಆಹಾರ ಸರಬರಾಜು ವಿರುದ್ಧ ವಿದ್ಯಾರ್ಥಿಗಳು ಸಿಡಿದೆದ್ದಿದ್ದರು.

ಇತ್ತೀಚೆಗೆ ವಿದ್ಯಾರ್ಥಿಗಳು ಸಿಎಂ ಸಿದ್ದರಾಮಯ್ಯ ಅವರ ತೋಣಚಿಕೊಪ್ಪಲು ನಿವಾಸದ ಬಳಿ ಪ್ರತಿಭಟನೆ ನಡೆಸಿ, ವಿವಿ ಹಾಸ್ಟೆಲ್‌ಗಳಲ್ಲಿ ಅವ್ಯವಸ್ಥೆಯನ್ನು ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದರು.

ಪುಟ ೧೦

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 402
ದೂರವಾಣಿ: 2425156

Tuesday 9 January 2018
ಆಂದೋಲನ
ಅಂತರ ಜಾಲ ವಿಳಾಸ
andolana.epapertoday.com
ಸುದ್ದಿಗಾಗಿ
andolana@gmail.com

22 ಕ್ಯಾರೆಟ್ ಜನ್ಮದ ದರ
ತೊಳಸಿ
THOLASI JEWELS
₹2760
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926